

ಸಿಕ್ಕಿಂ ರಾಜಧಾನಿ
ಗ್ಯಾಂಗ್ಟಕ್‌ನ ಪಕ್ಷಿನೋಟ



ಖಾಸಗಿ ಟೂರ್ ಆಪರೇಟರ್‌ಗಳ ಕೈಯಲ್ಲಿದೆ. ಸುತ್ತಾಡಲು ಅನೇಕ ಕಡೆ ಅರಣ್ಯ ವಿಭಾಗ ಮತ್ತು ಸೇನೆಯವರ ಅನುಮತಿ ಬೇಕಾಗುತ್ತದೆ. ಪ್ರತ್ಯೇಕ ಟ್ಯಾಕ್ಸಿ ಜೀಪುಗಳನ್ನು ಮಾಡಲು ಹಣ ಇಲ್ಲದಿದ್ದರೆ ಶೇರಿಂಗ್‌ನಲ್ಲಿಯೂ ಹೋಗಬಹುದು.

ಇಲ್ಲಿ ಶಾಕಾಹಾರಿಗಳಿಗೆ ಮಾತ್ರ ಸ್ವಲ್ಪ ಕಷ್ಟ. ಹೆಚ್ಚಿನ ಹೋಟೆಲುಗಳು ಮಾಂಸಾಹಾರಕ್ಕೆ ಮೀಸಲಾದವು. ಪರ್ವತ ರಾಜ್ಯದಲ್ಲಿ ಶರಾಬು ಸೇವನೆ ಮಾಮೂಲಿ ಸಂಗತಿ. ಮಹಿಳೆಯರೂ ಅಂಗಡಿಗಳಲ್ಲಿ ಶರಾಬು ಮಾರುತ್ತಾರೆ. ಆದರೆ ಅಲ್ಲಿ ಮಹಿಳೆಯರಿಗೆ ಅಪಾರ ಗೌರವ. ಹಾಗಾಗಿ ಅಪರಾಧವೂ ಬಹಳ ಕಡಿಮೆ.

ಹಿಮಾಲಯದ ಮಡಿಲಲ್ಲಿರುವ ಸಿಕ್ಕಿಂ ಪುಷ್ಪಗಳು ಮತ್ತು ಪಕ್ಷಿಗಳು ಅತಿ ಹೆಚ್ಚಿನ ಸಂಖ್ಯೆಯಲ್ಲಿರುವ ರಾಜ್ಯ. ಆರ್ಕಿಡ್ ಹೂಗಳ, ವಿಶ್ವಾದ್ಯಂತ ಕಂಡುಬರುವ 5000 ತಳಿಗಳಲ್ಲಿ ಸಿಕ್ಕಿಂನಲ್ಲೇ 650ಕ್ಕೂ ಅಧಿಕ ತಳಿಗಳಿವೆ.

ಮಾರ್ಚ್‌ನಿಂದ ಜೂನ್ ತಿಂಗಳು ಸಿಕ್ಕಿಂನಲ್ಲಿ ಸುತ್ತಾಡಲು ಉತ್ತಮ ಕಾಲ. ಹಿಮದ ಸೌಂದರ್ಯ ಕಾಣಬೇಕಾದರೆ ಅಕ್ಟೋಬರ್‌ನಿಂದ ಫೆಬ್ರುವರಿ ನಡುವೆ ಬರಬೇಕು. ಪಶ್ಚಿಮ ಬಂಗಾಳದ ಸಿಲಿಗುರಿ ಬಸ್ ಸ್ಟಾಪ್‌ನಿಂದ ಟ್ಯಾಕ್ಸಿ, ಜೀಪು, ಬಸ್ಸುಗಳಿವೆ. ಐದಾರು ಗಂಟೆಯ ದಾರಿ. ಡಾರ್ಜಿಲಿಂಗ್, ಕಲಿಂಪೊಂಗ್, ಇಲ್ಲಿಂದಲೂ ಜೀಪ್, ಮಿನಿ ಬಸ್ಸು ಇವೆ. ಸಿಕ್ಕಿಂನ ಹತ್ತಿರದ ವಿಮಾನನಿಲ್ದಾಣ ಪಶ್ಚಿಮಬಂಗಾಳದ ಬಾಗ್ ಡೋಗ್ರಾ. ಅಲ್ಲಿಂದ ಗ್ಯಾಂಗ್ಟಕ್‌ಗೆ 124 ಕಿ.ಮೀ. ದೂರ. ರೈಲಿನಲ್ಲಿ ಬರುವುದಾದರೆ ನ್ಯೂಜಲ್ ಪೈಗುರಿಗೆ ಬರಬೇಕು. ಅಲ್ಲಿಂದ 117 ಕಿ.ಮೀ. ದೂರವಿದೆ. ಖಾಸಗಿ ವಾಹನದಲ್ಲಿ ಬರುವುದಿದ್ದರೆ '31 ಎ' ರಾಜಮಾರ್ಗದಲ್ಲಿ ಬರಬೇಕು.

ಪ್ರತಿಕ್ರಿಯಿಸಿ: **feedback@sudha.co.in**